Date : 29-9-2015

# ಬ್ಯಾಡಗಿ ಮೆಣಸು ವಹಿವಾಟು–ವಾರ್ಷಿಕ ಗುರಿ ಮೀರಿದ ಸಾಧನೆ

ಬ್ಯಾಡಗಿ ಮಾರುಕಟ್ಟೆಯು ವಾರ್ಷಿಕ ಗುರಿಮೀರಿದ ದಾಖಲೆ ಮೆಣಸಿನಕಾಯಿ ವಹಿವಾಟು ನಡೆಸಿದೆಯೆನ್ನಲಾಗಿದ್ದು, 12 ಬಾರಿ ಲಕ್ಷ ಚೀಲಗಳ ಆವಕ ಕಂಡಿತ್ತೆನ್ನಲಾಗಿದ್ದು ಹಿಂದಿನ ವರ್ಷ ರೂ. 6.22 ಕೋಟಿ ಮಾರುಕಟ್ಟೆ ಶುಲ್ಕಗಳಿಸುವ ಗುರಿ ಮೀರಿ ಅಂತ್ಯದಲ್ಲಿ ರೂ. 6.51 ಕೋಟಿ ಶುಲ್ಕ ಸಂಗ್ರಹವಾಗಿದೆಯೆನ್ನಲಾಗಿದೆ. ಈ ವರ್ಷ ರೂ. 7.22 ಕೋಟಿ ರೂ. ಸಂಗ್ರಹ ಗುರಿ ಹಾಕಿ ರೂ. 9.31 ಕೋಟಿ ಸಂಗ್ರಹಿಸಿ ದಾಖಲೆ ನಿರ್ಮಿಸಿದೆ. ಈ ಹಿಂದೆ ರೂ. 300–400 ವ್ಯವಹಾರವಾಗುತ್ತಿದ್ದ ಬ್ಯಾಡಗಿ ಮಾರುಕಟ್ಟೆಯಲ್ಲಿ 2014–15ನೇ ಸಾಲಿನಲ್ಲಿ ರೂ. 600 ಕೋಟಿಗೂ ಮೀರಿ ವ್ಯವಹಾರವಾಗಿದೆಯೆನ್ನಲಾಗಿದೆ.

ಎರಡು ಮೂರು ವರ್ಷಗಳ ಹಿಂದೆ ಒಲಿಯೋರೆಸಿನ್ ಉದ್ಯಮಗಳು ಚೈನಾ ದೇಶದ ಮೆಣಸಿನಕಾಯಿ ಖರೀದಿ ಮಾಡುತ್ತಿದ್ದವು. ಆದರೆ ಈ ವರ್ಷ ಮಳೆಯಿಂದ ಚೈನಾದಲ್ಲಿ ಉತ್ಪಾದನೆ ಕಡಿಮೆಯಾಗಿ ಆ ಉದ್ಯಮಗಳಿಂದ ಸ್ಥಳೀಯ ಮೆಣಸಿನಕಾಯಿ ಬೇಡಿಕೆ ಹೆಚ್ಚಳವಾಗಿದೆಯೆನ್ನಲಾಗಿದೆ. ಮಸಾಲಾ ಉದ್ಯಮದಲ್ಲಿ ಬ್ಯಾಡಗಿ ಮೆಣಸಿನಕಾಯಿ ಸಾಕಷ್ಟು ಬಳಕೆಯಾಗುತ್ತಿರುವುದರಿಂದ ಬೇಡಿಕೆ ಹೆಚ್ಚಳವಿದ್ದು ಈ ವರ್ಷದಾದ್ಯಂತ ಬ್ಯಾಡಗಿ ಮೆಣಸಿನಕಾಯಿ ದರ ಉತ್ತಮ ಸ್ಥಿತಿಯಲ್ಲಿದೆ. ಈ ವರ್ಷ ಉತ್ತಮ ದರದಿಂದ ಪ್ರೇರಿತರಾಗಿ ಇತರ ಬೆಳೆಯತ್ತ ವಾಲಿಕೊಂಡಿದ್ದ ರೈತರು ಮುಂದೆ ಮೆಣಸಿನಕಾಯಿ ಬೆಳೆಯತ್ತ ಆಕರ್ಷಿತರಾಗಿ, ಮೆಣಸಿನಕಾಯಿ ಬಿತ್ತನೆ ಪ್ರದೇಶ ಹೆಚ್ಚಳವಾಗುವ ಸಂಭವವಿದೆ. ಮಳೆಯಾಶ್ರಿತ ಖಾರಿಫ್ ಬೆಳೆಯ ಪ್ರದೇಶಗಳಾದ ಕುಂದಗೋಳ, ಗದಗ, ಅಣ್ಣಿಗೇರಿ, ಧಾರವಾಡ–ಹುಬ್ಬಳ್ಳಿ ಪ್ರದೇಶಗಳ 1 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಏರಿಯಾದಲ್ಲಿ ಮೆಣಸು ಬಿತ್ತನೆ ಮಾಡಿ ಬೆಳೆ ಬೆಳೆಯಲಾಗುತ್ತಿತ್ತು. ಆದರೆ ಹಿಂದಿನೆರಡು ಮೂರು ವರ್ಷಗಳಲ್ಲಿ ಅತಿವೃಷ್ಟಿ, ಅನಾವೃಷ್ಟಿಗಳಾಗಿ ಶೇ 10 ರಷ್ಟು ಪ್ರದೇಶಗಳಲ್ಲಿ ಮಾತ್ರ ಬೆಳೆ ಬೆಳೆಯಾಗಿತ್ತೆನ್ನಲಾಗಿದ್ದು, ನೀರಾವರಿ ಪ್ರದೇಶಗಳಾದ ಬಳ್ಳಾರಿ, ರಾಯಾಚೂರು, ಕರ್ನಾಲ್ ಸೇರಿದಂತೆ ಇತರ ಪ್ರದೇಶಗಳ ಬೆಳೆಗಳು ಕಡಿಮೆಯಾದ ಸ್ಥಾನ ತುಂಬಿದ್ದು ಹಿಂದಿನ ವರ್ಷಕ್ಕಿಂತಲೂ ಈ ವರ್ಷ ಹೆಚ್ಚು ಮೆಣಸಿನಕಾಯಿ ಆವಕವಾಯಿತೆನ್ನಲಾಗಿದೆ. ಈ ಖಾರಿಫ್‌ನಲ್ಲೂ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆಯಾದ ವರದಿಗಳಿವೆ.

ರೈತರು ಮಾರುಕಟ್ಟೆಗೆ ತರುವ ಮೆಣಸಿನಕಾಯಿ ಸಾಕಷ್ಟು ತೇವಾಂಶದಿಂದ ಕೂಡಿರುವುದರಿಂದ ಖರೀದಿಯ ನಂತರ ಒಣಗಿಸಿ ಸಂಗ್ರಹಿಸಬೇಕಾಗುತ್ತಿದ್ದು, ಹೆಚ್ಚಿನ ಪ್ರಮಾಣದ ಆವಕವಾದಾಗ ಒಣಗಿಸಿ ಸಂಗ್ರಹಿಸಲು ವರ್ತಕರು ಸಾಹಸಪಡಬೇಕಾಗುತ್ತದೆ. ಗುಂಟೂರ್ ಮಾರುಕಟ್ಟೆಯಲ್ಲಿ ನೀರಿನ ಅಂಶವಿಲ್ಲದ ಒಣ ಮೆಣಸಿನಕಾಯಿಗೆ ಮಾತ್ರ ಏಲಂ ಮಾಡುತ್ತಾರೆ. ಅದರಂತೆ ಬ್ಯಾಡಗಿಯಲ್ಲೂ ಮಾಡಿದರೆ ಖರೀದಿಸಿ ಸಂಗ್ರಹಿಸಲು ಅನುಕೂಲವಾಗುವುರಿಂದ ಮಾರುಕಟ್ಟೆ ಈ ದಿಶೆಯಲ್ಲಿ ಚಿಂತನೆ ನಡೆಸಿದೆಯೆನ್ನಲಾಗಿದೆ.

quickmarketreports.com